ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ

ಸಿ.ಸಿ. ನಂ. **1379/2024** ಸಿ. ಡಬ್ಲ್ಯೂ ಃ **2** ಪಿ ಡಬ್ಲ್ಯೂ ಃ **7**

ಸಾಕ್ಷಿಯ ಹೆಸರು ಃ ಸಾಧೀಕ್ ಮಿಶ್ರಿಕೋಟಿ

ತಂದೆಯ ಹೆಸರು ಃ ಹುಸೇನಸಾಬ

ವಯಸ್ಸು ಃ 45 ವರ್ಷ

ಉದ್ಯೋಗ ಃ ಎನ್ ಎಚ್ ಎ ಐ ಸೂಪರ್ ವೈಸರ್.

ವಾಸಸ್ಥಳ ಃ ಅದರಗುಂಚಿ, ತಾಲೂಕಃ ಹುಬ್ಬಳ್ಳಿ.

ದಿನಾಂಕಃ 18/06/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದ

1. ಸಾಕ್ಷಿ ಮಹಜರನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ. 2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ. 2 ಸಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಎಲ್ಲಿ ಮಾಡಿದ್ದೇನೆ ನೆನಪಿಲ್ಲ, ದಿನಾಂಕ ನೆನಪಿಲ್ಲ. ನಿಪಿ. 2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ಓದಿ ಹೇಳಿಲ್ಲ. ನನ್ನ ಸಮಕ್ಷಮ ಪೋಲೀಸರು ಸ್ಥಳ ಮಹಜರು ಮಾಡಿಲ್ಲ, ಭಾವ ಚಿತ್ರದಲ್ಲಿ ನಾನು ಇದ್ದು, ಸದರಿ ಭಾವ ಚಿತ್ರವನ್ನು ಪಂಚನಾಮೆಯ ಕಾಲಕ್ಕೆ ತೆಗೆದಿರುತ್ತಾರೆ. ಭಾವ ಚಿತ್ರವನ್ನು ಈಗಾಗಲೇ ನಿಪಿ. 3 ಎಂದು ಗುರುತಿಸಲಾಗಿದೆ.

(ಮಾನ್ಯ ಸಸಅ ರವರ ಕೋರಿಕೆಯಂತೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ನಡೆಸಲು ಅನುಮತಿ ಕೋರಿದಂತೆ ನೀಡಲಾಯಿತು).

ಪಾಟೀ ಸವಾಲು: ಮಾನ್ಯ ಸಸಅ ರವರಿಂದ

2. ಪಂಚನಾಮೆಯನ್ನು ದಿಃ 24/05/2024 ರಂದು ಮಃ 04-30 ರಿಂದ 05-40 ರ ವರೆಗೆ ಚಾಸಾ 1 ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ 3 ರ ಸಮಕ್ಷಮ ನಿಪಿ. 2 ರಂತೆ ಪಂಚನಾಮೆ ಮಾಡಿದ್ದಾರೆ, ಓದಿ ಹೇಳಿದ ನಂತರ ನಿಪಿ. 2 ಕ್ಕೆ ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ, ಅದೇ ಸಮಯದಲ್ಲಿ ನಿಪಿ. 3 ರಂತೆ ಭಾವ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ, ಈ ಎಲ್ಲ ವಿಚಾರ ಗೊತ್ತಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ಃ ಇಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.